Regd No Bo 155 9-10-1969

SATYAVADI Daily MYSORE 4 ★ 53 rd Year of Publication

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಮೈಸೂರು ರಾಜದಲ್ಲಿ ಗ್ರಾಮ ಗುಮಾಸ್ತರ ನೇಮಕ

ಆಗಾಖಾನರ ವಿವಾಹ

ಲಂಡನ್— 20 ಮಿಲಿಯ ಇಸ್ಮೇಲಿ ಮುಸ್ಲಿಂರ ಧರ್ಮಗುರು 33 ವರ್ಷದ ಆಗಾಖಾನರು ಲೇಡಿ ಜೇಮ್ಸ್ ಸ್ಟೂವರ್ಟರನ್ನು ಈ ತಿಂಗಳು ಕಡೆಯಲ್ಲಿ ವಿವಾಹವಾಗಲಿರುವರು — ಈಕೆಯು ಸ್ಟೂವರ್ಟರನ್ನು 1957 ರಲ್ಲಿ ವಿವಾಹವಾಗಿ 1967 ರಲ್ಲಿ ವಿವಾಹ ವಿಚ್ಛೇದನಗೊಂಡವರು.

★

ಬಸವಲಿಂಗಯ್ಯ ಸಿಕ್ಕಿದ

ಮೈಸೂರು— ಜನರಿಗೆ ಪಾವತಿ ಮಾಡಬೇಕಾಗಿದ್ದ ಮನಿಯ್ಡರ್ಡರು ಹಣ ಇತ್ಯಾದಿಯೊಡನೆ ಮೂರು ತಿಂಗಳ ಹಿಂದೆ ಪರಾರಿಯಾಗಿದ್ದ ಪೋಸ್ಟ್‌ಮೆನ್ ಬಸವಲಿಂಗಯ್ಯನನ್ನು ಪೋಲೀಸರು ಹಿಡಿದಿರುವರು.

○

ಚಂಡಿಘರಕ್ಕಾಗಿ

ನವದೆಹಲಿ— ಚಂಡೀಘಡ ಮತ್ತು ಭಕ್ರಾ ವಿಚಾರದಲ್ಲಿ ಪಂಜಾಬಿನ ಹಕ್ಕನ್ನು ಒತ್ತಾಯ ಮಾಡಲು, ಪಂಜಾಬು ಶಾಸನ ಸಭೆಗಳ 6 ಕಾಂಗ್ರೆಸೇತರ ಸದಸ್ಯರೂ, ಮೂರು ಮಂದಿ ಪಾರ್ಲಿಮೆಂಟು ಸದಸ್ಯರೂ ಪ್ರಧಾನಿಯವರ ನಿವಾಸದ ಮುಂದೆ ಬುಧವಾರ 24 ಗಂಟೆ ಉಪವಾಸ ಮಾಡಿದರು.

★

ಪೋಲೀಸು ಅಧಿಕಾರಿಗಳ ಮೇಲೆ ಕ್ರಮ

ಜುಲೈ 31 ರಂದು ಶಾಸನಸಭೆಯಲ್ಲಿ ನಡೆದ ನಡೆದ ಪೋಲೀಸು ದಾಂಧಲೆ ಸಂಬಂಧದಲ್ಲಿ ಗುಪ್ತಾ ಸಮಿತಿ ವರದಿಯಂತೆ, ಐ ಜಿ ಪಿ, ಕಮಿಷನರ್ ಮತ್ತು ನಾಲ್ಕು ಮಂದಿ ಉನ್ನತ ಪೋಲೀಸು ಅಧಿಕಾರಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಲು ಪಶ್ಚಿಮ ಬಂಗಾಳ ಸರ್ಕಾರ ನಿರ್ಧರಿಸಿದೆ.

——

ರೂ 1 ಕ್ಕೆ ರೂ 1 50

ಗುಡಿಬಂಡೆ— 1 ರೂಪಾಯಿ ಮೌಲ್ಯದ 2 ಪೈಸೆ ನಿಕ್ಕಲ್ ನಾಣ್ಯ ಮತ್ತು 1 ಪೈಸಾ ತಾಂಬ್ರದ ನಾಣ್ಯಗಳನ್ನು ಇಲ್ಲಿಯ ಕೆಲವು ಅಂಗಡಿಯವರು ರೂ 1–50 ಕೊಟ್ಟು ತೆಗೆದುಕೊಳ್ಳುತ್ತಿರುವರು : ಕಾರಣ ಗೊತ್ತಿಲ್ಲ. ಬೆಂಗಳೂರು ಮತ್ತು ಗೌರಿಬಿದನೂರಿನಿಂದ 2–3 ದಿನಗಳಿಗೆ ಹುಡುಗರು ಈ ಕಾರ್ಯಕ್ಕೆ ಬರುವರು.

●

ಆಹಾರ ಆಮದು

ಇಂಡೋರು — 1972 ರ ಹೊತ್ತಿಗೆ ಎಲ್ಲ ಆಹಾರ ಆಮದೂ ನಿಲ್ಲಿಸಲಾಗುವುದೆಂದು ಮಂತ್ರಿ ಶ್ರೀ ಸೇಥಿ ಹೇಳಿದರು.

●

ಭೂಮಿ ಆಕ್ರಮ ಸತ್ಯಾಗ್ರಹ

ಬೆಂಗಳೂರು— ರಾಮಸಮುದ್ರ ಕಾವಲಿನ ಭೂಮಿ ಆಕ್ರಮಿಸಿದ 100 ಸತ್ಯಾಗ್ರಹಿಗಳು ಬುಧವಾರ ಬಂಧಿಸಲ್ಪಟ್ಟರು — ಒಟ್ಟು 160 ಮಂದಿ ಬಂಧನವಾಗಿದೆ.

○

ರೂ 12 ಕೋಟಿ ಚಂಡಿಯಜ್ಞ

ರಾಜಕೋಟೆ— ರೂ 12 ಕೋಟಿ ಚಂಡಿ ಯಜ್ಞದ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಬಲ್ವಂತಾರಸಿಂಹಜೀ ರಾಣರು ಸರಕಾರಿ ಭೂಮಿಯನ್ನು ಆಕ್ರಮಿಸಿದರೆಂದು ದಸ್ತಗಿರಿ ಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟರು — ನವೆಂಬರು 19ರಂದು ಕಾರ್ಯಪುರ ಗ್ರಾಮದಲ್ಲಿ ಯಜ್ಞ ನಡೆಯತಕ್ಕ ದ್ದಾಗಿದೆ — ಸರಕಾರಿ ಭೂಮಿ ಆಕ್ರಮಿಸಿ ನೆಲನನ್ನು ಸಮಪಡಿಸಿದರೆಂದು ಆರೋಪ — ಕಾರ್ಯಪುರ ಗ್ರಾಮದಲ್ಲಿ ರಾಣರ ಭೂಮಿಯಲ್ಲಿ ಸೆಪ್ಟಂಬರು 17 ರಂದು ಸ್ವಾಮಿ ಲಕ್ಷ್ಮಣ ಚೈತನ್ಯ ಬ್ರಹ್ಮಚಾರಿಯವರು ಭೂಮಿ ಪೂಜೆ ನಡೆಸಿದರು.

ಆಲ್ಲೂ ನೂಲುವ ಸ್ಪರ್ಧೆ

ಬ್ರಿಟಿಷ್ ಕೊಲಂಬಿಯಾದ ವಾಂಕೊವರಿನಲ್ಲಿ ಗಾಂಧಿ ಶತಮಾನೋತ್ಸವ ಗುರುತಾಗಿ ನೂಲುವ ಸ್ಪರ್ಧೆ ನಡೆಯಿತು ; 30 ಮಂದಿ ಭಾಗವಹಿಸಿದ್ದರು.

★

ಗ್ರಾಮ ಗುಮಾಸ್ತೆ

ಬೆಂಗಳೂರು— ರಾಜ್ಯದ 7800 ಗ್ರಾಮ ಪಂಚಾಯಿತಿಗಳಿಗೆ ಪ್ರತಿಯೊಂದಕ್ಕೂ ಒಬ್ಬೊಬ್ಬ ಗುಮಾಸ್ತೆಯನ್ನು ನೇಮಿಸಲಾಗುವುದು — ಇವರು ಆಯಾ ಗ್ರಾಮದ ಕಂದಾಯ ಮತ್ತಿತರ ಸರಕಾರಕ್ಕೆ ಬರಬೇಕಾದ ಹಣಗಳನ್ನು ವಸೂಲಶ್ಯಡಿ ಲೆಕ್ಕ ವಿಡುವರು.

★

ಅತಿಕ್ರಮ ಪ್ರವೇಶ

ನವದೆಹಲಿ— ಚೀನಾ ರಾಯಭಾರಿ ಕಚೇರಿಗೆ ಅತಿಕ್ರಮ ಪ್ರವೇಶಿಸಿದ ಮದರಾಸಿನ ಶಿಲ್ಪವಿದ್ಯಾ ವಿದ್ಯಾರ್ಥಿ ಬಂಧಿಸಲ್ಪಟ್ಟು ಜಾಮೀನಿನ ಮೇಲೆ ಬಿಡಲ್ಪಟ್ಟನು.

○

ದಾದಿಗೆ ಶಿಕ್ಷೆ

ಗಾಜಾನಗರ— ಇಸ್ರೇಲಿ ಅಪ್ಪಣೆ ಪಡೆಯದೆ ಗಾಯಗೊಂಡ ಒಬ್ಬ ಅರೆಬ್ ಗುರಿಲಾದವನಿಗೆ ಚಿಕಿತ್ಸೆ ನಡೆಸಿದ ದಾದಿಗೆ ಇಸ್ರೇಲಿ ಮಿಲಿಟರಿ ಕೋರ್ಟು ಮೂರು ತಿಂಗಳ ಸಜೆ ವಿಧಿಸಿತು.

★

ಹುಂಜ ಮಗುವನ್ನು ಕೊಂದಿತು

ಗುಜರಾತಿನ ಕೊಕ್ರಾ ಗ್ರಾಮದಲ್ಲಿ ಒಂದು ಕುಪಿತ ಹುಂಜವು 12 ತಿಂಗಳ ಮಗುವನ್ನು ಕೊಂದಿತು.

ಹಕ್ಕು ಸಿಕ್ಕಿತು

ಕಲ್ಕತ್ತಾ— ಪಶ್ಚಿಮ ಬಂಗಾಳಾ ಸರಕಾರಿ ನೌಕರರು, ಮುಸ್ಸರವೂ ಸೇರಿ ಎಲ್ಲ ಟ್ರೇಡ್ ಯೂನಿಯ್ಡ ಹಕ್ಕುಗಳನ್ನು ಪಡೆದರು.

★

ಪ್ರಾಣಾರ್ಪಣೆ

ಲಕ್ನೊ— ಪ್ರೆಟಂ ಎಂಬ 62 ವರ್ಷದ ಸಾಧುವು ತಾವು ನಿರ್ಮಿಸಿ ಬೆಂಕಿ ಹತ್ತಿಸಿದ ಚಿತೆಗೆ ಹಾಕಿ ಪ್ರಾಣಾರ್ಪಣೆ ಮಾಡಿದನು; ಒಂದು ದೇವಾಲಯ ಕಟ್ಟಬೇಕೆಂಬ ಆಶೆ ನೆರವೇರದೆ ಬೇಸರಗೊಂಡು ಪ್ರಾಣಾರ್ಪಣೆ ಮಾಡಿದನು : ಇವನು ಶೇಖರಿಸಿದ ಹಣ ಕಳುವಾಯಿತು.

★

ಮಾವೋ ಭಿತ್ತಿಪತ್ರ

ತ್ರಿಚೂರು— ಇಲ್ಲಿ ಬುಧವಾರ ಗೋಡೆಗಳ ಮೇಲೆ ಕಾಣಿಸಿಕೊಂಡ ಮಾವೋ ಭಿತ್ತೀಪತ್ರಗಳು ಸಶಸ್ತ್ರ ದಂಗೆ ನಡೆಸಲು ಜನತೆ ದುರ್ಬೋಧನೆ ಮಾಡಿದೆ.

★

ಯುದ್ಧಕಾರ್ಯದಲ್ಲಿ ಕಾಗೆ ಗೂಬೆ

ವಾಷಿಂಗ್ಟ್ಯ— ಕಾಗೆ ಗೂಬೆ ರಣಹದ್ದು ಮುಂತಾದವನ್ನು ಯುದ್ಧದಲ್ಲಿನ ಅಪಾಯಕಾರಿಯಾದ, ಕಷ್ಟಕರವಾದ, ತುಂಬಾ ಖರ್ಚಿನಾದ, ವಾಯುಮಂಡಲದಲ್ಲಿ ಫೋಟೋ ತೆಗೆಯುವದು, ಕ್ಷಿಪಣಿ ನಡೆಸುವದು, ಮೈ ಪತ್ತೆ ಹಚ್ಚುವು, ಮಿಸ್ಸೈಲುಗಳ ಶೋಧನೆ ಮತ್ತು ನಾಶಮಾಡುವದಕ್ಕೆ ಉಪಯೋಗಿಸಿಕೊಳ್ಳುವ ಬಗ್ಗೆ ಮಿಸಸಿಪಿ ವಿಶ್ವವಿದ್ಯಾಲಯದೊಡನೆ 600000 ಡಾಲರು ಖರ್ಚಿನ ಒಪ್ಪಂದವನ್ನು ಸರಕಾರ ಮಾಡಿಕೊಂಡಿದೆ.

●

ಚರ್ಮದ ವ್ಯಾಪಾರದ ಮೋಸದ್ದು

ಮುಂಬಯಿನ ಇಬ್ಬರು ಭಾರೀ ವರ್ತಕರಾದ ಬಿ ಪಿ ಪಟೇಲ್ ಮತ್ತು ಪಿ ಎಂ ಪಟೇಲರಿಗೆ " ಚರ್ಮದ ವ್ಯಾಪಾರದ " ಮೋಸದ್ದುಮಯಲ್ಲಿ ತೀವ್ರ ಶಿಕ್ಷೆ ವಿಧಿಸಲಾಗಿದೆ ಮತ್ತು ಈ ಪ್ರಕರಣದಲ್ಲಿ ರೂ 90 ಸಾವಿರ ದಂಡ ವಿಧಿಸಲಾಗಿದೆ. ಆರೋಪಿಗಳು ಮುದ್ರಾಸಿನ ಚರ್ಮದ ವ್ಯಾಪಾರಿಗಳಿಗೆ ಕೊಡಲಾಗಿದ್ದ ಲೈಸೆನ್ಸುಗಳನ್ನು ಖರೀದಿಗೆ ಬಿಗೆದುಕೊಂಡು ಸರ್ಕಾರಕ್ಕೆ ಬರಬಹುದಾಗಿದ್ದ ರೂ 5 ಲಕ್ಷ ಮೌಲ್ಯದ ವಿದೇಶೀ ವಿನಿಮಯ ಬಾರದಂತೆ ಮೋಸಾ ಮಾಡಿದರೆಂದು ಅವರ ಮೇಸ ಮೋಸಾ ಹಾಗೂ ಒಳ ಸಂಚು ಆರೋಪ ಹೊರಿಸಲಾಗಿತ್ತು.

— — —

ಜರ್ಮನಿಯಲ್ಲಿ ಫುಟ್‌ಬಾಲ್ ಆಟ

ಹ್ಯಾಂಬರ್ಗ್ (ಡಾಡ್)— ಫೆಡರಾಲ್ ರಿಪಬ್ಲಿಕ್ ಜರ್ಮನಿಯಲ್ಲಿ ಫುಟ್‌ಬಾಲ್ ಆಟವು ಅತ್ಯಂತ ಜನಾದರಣೀಯವಾದುದು. ಪ್ರೇಕ್ಷಕರೂ ಕ್ರೀಡಾಪಟುಗಳೂ ಹೆಚ್ಚುತ್ತಿದ್ದಾರೆ. ಫುಟ್‌ಬಾಲ್ ಅಸೋಸಿಯೇಷನ್ ಸಂಗ್ರಹಿಸಿರುವ ಅಂಕಿಅಂಶಗಳಿಂದ 2722503 ಕ್ಕೆ ಏರಿದೆ. ಒಟ್ಟು 16292 ಕ್ಲಬ್‌ಗಳಿವೆ. ಫುಟ್‌ಬಾಲ್ ಪಂದ್ಯಗಳು 84763 ಕ್ಕೆ ಹೆಚ್ಚಿವೆ.

— — —

ಟೈಪಿಸ್ಟ್ ಸಿಗ್ಗಿ

ಸ್ಟುಟಗಾರ್ಟ್ (ಡಾಡ್)— ಫೆಡರಾಲ್ ಜರ್ಮನಿಯ ವರ್ತಮಾನ-ಪತ್ರಿಕೆಯ ಕಾರ್ಯದರ್ಶಿಯಾಗಿರುವ ' ಸಿಗ್ಗಿ ' ಎಂಬಾಕೆಯು ಪ್ರಪಂಚದಲ್ಲೇ ಅತ್ಯಂತ ಕ್ಷಿಪ್ರಚಳಕಗಾರ್ತಿ ಎಂಬ ಬಿರುದನ್ನು ಗಳಿಸಿದ್ದಾಳೆ. ವಿದ್ಯುತ್ ಟೈಪುರೈಟರಿನ ಮೇಲೆ ಆಕೆಯ ಕೈಬೆರಳು ವಿಶೇಷವಾದ ತೇಲಿಕೆ ಕೆಲಸಮಾಡುತ್ತಾ ಪ್ರಪಂಚದ ಛಾಂಪಿಯನ್ ಪ್ರಶಸ್ತಿಯನ್ನು ನಾಲ್ಕನೇ ಸಾರಿ ಗಳಿಸಿದ್ದಾಳೆ. ಈಕೆಯು ನಿಮಿಷಕ್ಕೆ 716 6 ಪದಗಳ ವೇಗದಲ್ಲಿ ಅರ್ಧ ಗಂಟೆಯ ಕ್ರಾಲ ಟೈಪು ಮಾಡುವಳು. (ಯೂಪಿಎಸ್)

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾತಿಂಗಳಿಗೆ 40 ಪೈಸೆ; ಆಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆರೂ. 2

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

SHAKTI
SUDHA

A Superb Tonic

ವುಡ್‌ಲಾಂಡ್ ತಾ. 10-10-69 ರಿಂದ
ಶಿ ನ ಅಮೋಘ ಸ್ವಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೆರಾ 10-10-69 ರಿಂದ
.... ಅಮೋಘ ತಮಿಳು ಚಿತ್ರ ....
ಎಂಗವೀಟ್ಟು ಪಿಳ್ಳೆ
ಪಾತ್ರ— ಎಂ ಜಿ ಆರ್ ಬಿ ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore 6